**ದಿನಾಂಕ 26.03.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಎಸ್.ವಿ.ಎಂ. ವಕೀಲರಿಂದಃ**

1. 1 ರಿಂದ 4 ನೇ ಪ್ರತಿವಾದಿಗಳ ತಂದೆ ದಿನಾಂಕ 15.02.1971 ರಲ್ಲಿ ಕರಿಯಪ್ಪ ಬಿನ್ ಭೂತಣ್ಣರವರಿಂದ ದಾವಾ ಐಟಂ ನಂ. 3 ಮತ್ತು 4 ರ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.28 ನ್ನು 26.07.1972 ರಲ್ಲಿ ಹನುಮಂತಯ್ಯ ಬಿನ್ ಕುಂಟಪ್ಪ ರವರಿಂದ ಶುದ್ಧ ಕ್ರಯ ಪತ್ರ ಮುಖಾಂತರ ಮಹಲಿಂಗಪ್ಪನವರು ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಖರೀದಿ ಮಾಡುವ ಕಾಲಕ್ಕೆ 175/2 ಆಗಿದ್ದು, ಪೋಡಿಯಾಗಿ ಹೊಸ ಸರ್ವೆ ನಂ. 449 ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಬಿ.ಮಹಲಿಂಗಪ್ಪನವರು ಸ್ವಯಾರ್ಜಿತವಾಗಿ ದಾವಾ ಐಟಂ ನಂ.26 ರನ್ನು ಜುಂಜಣ್ಣ ಬಿನ್ ತಿಪ್ಪಮ್ಮನವರ ಕಡೆಯಿಂದ 16.09.1974 ರಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಅದು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಲಾಗಿದೆ ಎಂದು ನುಡಿಯುತ್ತಾರೆ.
2. 03.08.1976 ರಲ್ಲಿ ದಾವಾ ಐಟಂ ನಂ.9 ನ್ನು ಕರಿಯಪ್ಪ ಬಿನ್ ಗೋವಿಂದಣ್ಣನವರ ಕಡೆಯಿಂದ ಮಹಲಿಂಗಪ್ಪನವರು ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಅದು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ಸದರಿಯವರು ದಾವಾ ಐಟಂ ನಂ.23 ನ್ನು ಸಹ ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಅದು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 9 ಮತ್ತು 23 ರ ಆಸ್ತಿಗಳು ಎರಡು ಒಂದೇ ಎಂದರೆ ಇರಬಹುದು, ಆದರೆ ಅದು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ಸದರಿ ಎರಡ ದಾವಾ ಐಟಂ ನಂ.2 ನ್ನು ಸ್ವಯಾರ್ಜಿತವಾಗಿ ಮಹಲಿಂಗಪ್ಪನವರು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಅದು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ಅದರಂತೆ ಎಂ.ಆರ್. 9/1972-73 ರಂತೆ ಖಾತೆಯಾಗಿದೆ ಎಂದರೆ ಸಾಕ್ಷಿಯು ಖಾತೆ

ಮಾಡಿಕೊಂಡಿದ್ದಾರೆ, ಆದರೆ ಅದು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2, 3, 4, 9, 10, 23, 26 ಮತ್ತು 28 ರ ಆಸ್ತಿಗಳನ್ನು ಮಹಲಿಂಗಪ್ಪನವರು ತಮ್ಮ ಸ್ವಂತ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಅವರಿಗೆ ನಡೆಯಲು ಆಗುತ್ತಿರಲಿಲ್ಲ, ಅವರಿಗೆ ಯಾವುದೇ ಸಂಪಾದನೆ ಇರಲಿಲ್ಲ ಮತ್ತು ಸದರಿ ಆಸ್ತಿಗಳು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಲಾಗಿದೆ ಎಂದು ನುಡಿಯುತ್ತಾರೆ.

3. ದಾವಾ ಐಟಂ ನಂ.1, 5, 6, 7, 8, 11, 12, 24, 25 ರ ಆಸ್ತಿಗಳನ್ನು ದಾನದ ಮುಖಾಂತರ ಕೆಂಚಮ್ಮನ ಕಡೆಯಿಂದ ಮಹಲಿಂಗಪ್ಪನವರಿಗೆ ಬಂದಂತಹ ಆಸ್ತಿಗಳು ಎಂದರೆ ಸರಿಯಲ್ಲ, ಅವರು ದೊಡ್ಡಮಗನಾದ ಕಾರಣ ಕೆಂಚಮ್ಮನ ಗಂಡ ನಿಂಗಣ್ಣ ತೀರಿಕೊಂಡ ನಂತರ ಅವರ ಅಂತ್ಯಕಾರ್ಯಗಳನ್ನು ಮಹಲಿಂಗಪ್ಪನರೇ ಮಾಡಿದ ಕಾರಣ, ಅವರೇ ಹಿರಿಯವರು ಆದ ಕಾರಣ ಅವರ ಹೆಸರಿಗೆ ಬಂದಿದೆ, ಅದೇ ರೀತಿ ನನ್ನ ಗಂಡನಿಂದಲೂ ಸಹ ಮಾಡಿಸಿದ್ದಲ್ಲಿ ನನ್ನ ಗಂಡನೂ ಸಹ ಸದರಿ ಕ್ರಿಯೆಗಳನ್ನು ಮಾಡುತ್ತಿದ್ದರು ಎಂದು ನುಡಿಯುತ್ತರೆ. ಸದರಿ ಆಸ್ತಿಗಳು ಅಜ್ಜಿಯ ಆಸ್ತಿಗಳಾದ ಕಾರಣ ಸದರಿ ಆಸ್ತಿಗಳು 3 ಜನ ಗಂಡು ಮಕ್ಕಳಿಗೆ ಬರಬೇಕು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳನ್ನು 24.02.1953 ರಂದು ನೊಂದಣಿ ದಾನಪತ್ರವಾಗಿದ್ದು, ಅಂದಿನಿಂದಲೂ ಮಹಲಿಂಗಪ್ಪನೇ ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ನಾವು ಒಟ್ಟು 18 ಜನ ಒಟ್ಟು ಕುಟುಂಬದಲ್ಲಿ ಇದ್ದೆವು ಎಂದು ನುಡಿಯುತ್ತಾರೆ.

4. ನನ್ನ ಮಾವ ದಾಸಪ್ಪನವರಿಗೆ ಪಿತ್ರಾರ್ಜಿತವಾಗಿ ದಾವಾ ಐಟಂ ನಂ.13 ರಿಂದ 22, 25, 30 ರಿಂದ 34 ರ ಆಸ್ತಿಗಳು ಮಾತ್ರ ಬಂದಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದು, ಹೊಸದಾಗಿ ದುಡಿದು ಆಸ್ತಿಗಳನ್ನು ಖರೀದಿ ಮಾಡಿ ಮಹಲಿಂಗಪ್ಪನವರು ಅವರ ಹೆಸರಿಗೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಮಹಲಿಂಗಪ್ಪನವರು ಒಟ್ಟು ಕುಟುಂಬದಲ್ಲಿ ಎಂದಿಗೂ ಇರಲಿಲ್ಲ ಎಂದರೆ ಸರಿಯಲ್ಲ. ಕೆಂಚಮ್ಮನ ಮನೆಯಲ್ಲಿ ಮಹಲಿಂಗಪ್ಪನವರು ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಜ್ಜಿ ಮನೆಯನ್ನು ಸ್ಟೋರ್ ರೂಂ ಮಾಡಿಕೊಂಡಿದ್ದು, ಬೆಳೆದ ದವಸ

ಧಾನ್ಯಗಳನ್ನು ಅಲ್ಲಿಯೇ ಇರಿಸುತ್ತಿದ್ದೆವು ಎಂದು ನುಡಿಯುತ್ತಾರೆ. ಎಲ್ಲಾ ಪಿತ್ರಾರ್ಜಿತ ಆಸ್ತಿಗಳು ಬರಡು ಭೂಮಿಯಾಗಿದ್ದು, ಅವುಗಳಿಂದ ಯಾವುದೇ ಆದಾಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಹಲಿಂಗಪ್ಪನವರು ಹಿರಿಯ ಮಗನಾದ ಕಾರಣ ಎಲ್ಲಾ ಆಸ್ತಿಳನ್ನು ಅವರ ಹೆಸರಿಗೆ ಮಾಡಿಸಿಕೊಂಡು ತಮ್ಮಂದಿರಿಗೆ ಮೋಸ ಮಾಡಿದ್ದಾರೆ ಎಂದು ನುಡಿಯುತ್ತಾರೆ.

5. ದಾವಾ ಐಟಂ ನಂ.34 ರ ಜಮೀನು ಯಾರ ಹೆಸರಿಗೆ ಇದೆ ಎಂದರೆ ಸಾಕ್ಷಿಯು ಅದು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ನೆನಪಿಲ್ಲ, ದಾವಾ ಆಸ್ತಿಗಳು ಒಟ್ಟು 24 ಸರ್ವೆ ನಂಬರ್ ಗಳು ಇದ್ದು, ಎಲ್ಲವನ್ನೂ ನನಗೆ ನೆನಪಿಟ್ಟುಕೊಳ್ಳಲು ಕಷ್ಟವಾಗುತ್ತದೆ, ದಾಖಲಾತಿಗಳನ್ನು ಕೊಟ್ಟಿದ್ದೇನೆ. ಸದರಿ ಆಸ್ತಿ ರಂಗಪ್ಪನವರ ಹೆಸರಿಗೆ ಇದೆ ಎಂದರೆ ಸರಿ, ಆದರೆ ಒಟ್ಟು ಕುಟುಂಬದ ಆಸ್ತಿಯಾಗಿದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ರಂಗಪ್ಪನಿಗೆ ಹೇಗೆ ಬಂದಿದೆ ಎಂದರೆ ಸಾಕ್ಷಿಯು ರಂಗಪ್ಪನಿಗೆ ಇಬ್ಬರು ಹೆಂಡತಿಯರು ಇದ್ದು, ಮೊದಲನೇ ಹೆಂಡತಿಯನ್ನು ಅವರು ಕುಟುಂಬದಿಂದ ಬಿಡುಗಡೆ ಮಾಡಿಕೊಂಡು ಆಸ್ತಿ ಹೋಗಬಾರದು ಎಂದು ಎರಡನೇ ಹೆಂಡತಿಯನ್ನು ಮದುವೆ ಮಾಡಿಸಿ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಕೆಲವೊಂದನ್ನು ರಂಗಪ್ಪನ ಹೆಸರಿಗೆ ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ. ಅದನ್ನು ಶಟ್ಟರಮಾಗಿ ಎಂದು ಕರೆಯುತ್ತಾರೆ, ಬಹುಶಃ ಸದರಿ ಆಸ್ತಿಯನ್ನು ಶಟ್ಟರಿಂದ ಖರೀದಿ ಮಾಡಿರಬಹುದು ಎಂದು ನುಡಿಯುತ್ತಾರೆ. ಮಹಲಿಂಗಪ್ಪನವರು ರಂಗಪ್ಪನ ಹೆಸರಿಗೆ ಯಾವುದೇ ಆಸ್ತಿಯನ್ನು ಮಾಡಿಲ್ಲದಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. 08.10.2003 ರಲ್ಲಿ ಮಹಲಿಂಗಪ್ಪನವರು ಕಮಲಮ್ಮ ಎನ್ನುವವರಿಗೆ ಸರ್ವೆ ನಂ. 129/13 ಎ ಪೈಕಿ ಒಂದು ಗುಂಟೆ ಜಮೀನನ್ನು ಶುದ್ಧ ಕ್ರಯಕ್ಕೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಗಮನಕ್ಕೆ ಬಂದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಕಮಲಮ್ಮ ಖರೀದಿ ಮಾಡಿದ ಆಸ್ತಿಯನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಕಮಲಮ್ಮನನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲದೇ ಇರಬಹುದು, ಆದರೆ ಆಸ್ತಿಯನ್ನು ಸೇರಿಸಿದ್ದೇವೆ ಎಂದು ನುಡಿಯುತ್ತಾರೆ. ಬಿ. ಮಹಲಿಂಗಪ್ಪನವರು 21.02.2003 ರಂದು ರಂಗನಾಥಪ್ಪ ಎನ್ನುವವರಿಗೆ 129/11 ರಲ್ಲಿ 1 ಗುಂಟೆಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಮಹಲಿಂಗಪ್ಪನ ಹೆಸರಿಗೆ ಸುಮಾರು ಆಸ್ತಿಗಳು ಇದ್ದು, ಅವುಗಳನ್ನು

ಒಂದೊಂದಾಗಿ ಮಾರಾಟ ಮಾಡಿರುತ್ತಾರೆ, ಅವುಗಳು ಯಾವುದೂ ನಮ್ಮ ಗಮನಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತ್ಯೇಕವಾಗಿರುವುದರಿಂದ ಮಹಲಿಂಗಪ್ಪನವರು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಮಹಲಿಂಗಪ್ಪನವರ ಸ್ವಯಾರ್ಜಿತ ಆಸ್ತಿಯಾಗಿದ್ದು, ಅವರು ಪ್ರತ್ಯೇಕವಾಗಿ ಅನುಭವದಲ್ಲಿ ಇದ್ದರು ಎಂದರೆ ಎಲ್ಲವೂ ಪಿತ್ರಾರ್ಜಿತ ಆಸ್ತಿಯಾಗಿದ್ದು, ಆದರೆ ಅವರು ಸಾಯುವ ಕಾಲಕ್ಕೆ ಅವರಿಗೆ ಹಣದ ಅವಶ್ಯಕತೆ ಇದ್ದ ಕಾರಣ ಒಂದೊಂದೆ ಗುಂಟೆಯನ್ನು ನಮ್ಮ ಗಮನಕ್ಕೆ ಬಾರದಂತೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

7. ನಾನು ಈಗ ನೋಡುತ್ತಿರುವ ದಾಖಲಾತಿ 2005-06 ನೇ ಸಾಲಿನ ಸ್ವಯಂ ತೆರಿಗೆಯ ಸ್ಥಿರಾಸ್ಥಿ ಮತ್ತು ಚರಾಸ್ತಿಯ ಪಟ್ಟಿ ಎಂದರೆ ಸರಿ, ಸಾಕ್ಷಿ ಸದರಿ ದಾಖಲಾತಿಯನ್ನು ಗುರುತಿಸಿದ ಕಾರಣ, ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಊರುಕೆರೆಯಲ್ಲಿ ನಾನು ಒಂದು ಕಮರ್ಷಿಯಲ್ ಸೈಟು ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿಯು ನನ್ನ ದುಡಿಮೆ ಹಣದಲ್ಲಿ 18 ಸಾವಿರಕ್ಕೆ ಸದರಿ ಸೈಟು ಖರೀದಿ ಮಾಡಿದ್ದು, ಅದನ್ನು ಈಗಾಗಲೇ ಮಾರಾಟ ಮಾಡಿದ್ದೇನೆ ಎಂದು ನುಡಿಯುತ್ತಾರೆ. ತುಮಕೂರು ಶಿರಾ ಗೇಟಿನಲ್ಲಿ 30*40 ರ ಸೈಟು ಖರೀದಿ ಮಾಡಿದ್ದೇನೆ ಎಂದರೆ ಸಾಕ್ಷಿಯು ನನ್ನ ದುಡಿಮೆ ಹಣದಲ್ಲಿ 18 ಸಾವಿರಕ್ಕೆ ಸದರಿ ಸೈಟು ಖರೀದಿ ಮಾಡಿದ್ದು, ಅದನ್ನು ಈಗಾಗಲೇ ಮಾರಾಟ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಮಗನಿಗೆ ನಾನು ಮನೆ ಮಾರಾಟ ಮಾಡಿದ್ದು, ಹಣವನ್ನು ಪಡೆದಿಲ್ಲ ಎಂದು ತೋರಿಸಲಾಗಿದೆ ಎಂದರೆ ಸರಿ, ಆದರೆ ಆತ ನನ್ನ ಸಾಲವನ್ನು ತೀರಿಸಿದ್ದಾನೆ ಎಂದು ನುಡಿಯುತ್ತಾರೆ.

8. 2005-06 ರ ಸಾಲಿನಲ್ಲಿ ಗಂಡನ ಮನೆಯ ಉಡುಗೊರೆ ಹಾಗೂ ವೇತನದಿಂದ 2 ಎಳೆ 50 ಗ್ರಾಂ ಚಿನ್ನದ ಸರವೆಂದು ತೋರಿಸಿದ್ದೇನೆ ಎಂದರೆ ಸರಿ, ಸಾಕ್ಷಿಯು ಗಂಡನ ಮನೆ ಕಡೆಯಿಂದ 20 ಗ್ರಾಂ ಸರವನ್ನು ಕೊಟ್ಟಿದ್ದು, ಆದರೆ ಅದರಲ್ಲಿ ಕರಿಮಣಿ ಜಾಸ್ತಿ ಇದ್ದು, ತೂಕ ಹಾಕಿಸಿದಾಗ ಬರಿ 12 ಗ್ರಾಂ ಮಾತ್ರ ಚಿನ್ನ ಸಿಕ್ಕಿರುತ್ತದೆ, ಅವರು ಈಗಲೂ ನನಗೆ ಏನೂ ಕೊಟ್ಟಿರುವುದಿಲ್ಲ. 10 ವರ್ಷದ ಹಿಂದೆಯೇ ನಾನು ಆ ರೀತಿ ಚಿನ್ನವನ್ನು ಸೇರಿಸಿದ್ದೆನು. 2010-11 ರ ಸಾಲಿನ ಸ್ವಯಂ ಆಸ್ತಿ ತೆರಿಗೆಯ ಪಟ್ಟಿ ಎಂದರೆ ಸರಿ, ಸಾಕ್ಷಿ ಗುರುತಿಸಿದ ಕಾರಣ, ಅದನ್ನು ನಿ.ಡಿ.2

ಎಂದು ಗುರುತಿಸಲಾಯಿತು. ಅದರಲ್ಲಿ 80 ಗ್ರಾಂ ಚಿನ್ನದ ಸರ ಗಂಡನ ಮನೆ ಮತ್ತು ವೇತನದಿಂದ ಎಂದು ತೋರಿಸಿದ್ದೇನೆ ಎಂದರೆ ಸಾಕ್ಷಿಯು ಅದೇ ಚಿನ್ನಕ್ಕೆ ನಾನು ಚಿನ್ನವನ್ನು ಹಾಕಿಸಿ ಎರಡು ಎಳೆ ಚಿನ್ನದ ಮಾಂಗಲ್ಯ ಚೈನನ್ನು ಮಾಡಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ದಾವೆಯಲ್ಲಿ ಸದರಿ ಒಡವೆಗಳನ್ನು ಸೇರಿಸಿಲ್ಲ ಎಂದರೆ ಸಾಕ್ಷಿಯು ಅದು ನಮ್ಮ ಸ್ವಂತ ದುಡಿಮೆಯ ಒಡವೆಗಳು ಎಂದು ನುಡಿಯುತ್ತಾರೆ.

9. ನನ್ನ ಗಂಡನ ಪಿತ್ರಾರ್ಜಿತ ಆಸ್ತಿಯಲ್ಲಿ ಸ್ವಾಧೀನದಿಂದ ಇದ್ದು, ಎಲ್ಲಾ ಆದಾಯವನ್ನು ನಾವೇ ತೆಗೆದುಕೊಂಡಿದ್ದೇವೆ ಅದರಲ್ಲಿ ಎಲ್ಲಾ ಆಸ್ತಿಗಳು ನನ್ನ ಹೆಸರಿಗೆ ಖರೀದಿ ಮಾಡಿ ಮತ್ತು ಚಿನ್ನಗಳನ್ನು ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಸ್ವಂತ ದುಡಿಮೆಯಿಂದ ನಾನು ಆಸ್ತಿಗಳನ್ನು ಖರೀದಿ ಮಾಡಿ ಚಿನ್ನವನ್ನು ಮಾಡಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. 16.06.1984 ರಲ್ಲಿ ನಿಮ್ಮ ಗಂಡ 75*45 ರ ಒಂದು ಸೈಟನ್ನು ಖರೀದಿ ಮಾಡಿದ್ದಾರೆ, ಅದು ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ, ನಾನು ಮತ್ತು ನನ್ನ ಗಂಡ ಇಬ್ಬರೂ ಕೆಲಸಕ್ಕೆ ಸೇರಿಕೊಂಡು ಅದರಿಂದ ಬಂದ ಆದಾಯದಿಂದ ರೂ. 10000/- ರೂಪಾಯಿಗಳಿಗೆ ಖರೀದಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಪಿತ್ರಾರ್ಜಿತ ಆಸ್ತಿಯಿಂದ ಖರೀದಿ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ನನಗೆ ಇಬ್ಬರು ಮಕ್ಕಳು. ನನ್ನ ಇಬ್ಬರು ಮಕ್ಕಳು ನನಗೆ ರಿಲೀಸ್ ಡೀಡ್ ಬರೆದುಕೊಟ್ಟು ಒಟ್ಟು ಕುಟುಂಬದಿಂದ ಹಕ್ಕು ನಿವೃತ್ತಿ ಹೊಂದಿದ್ದಾರೆ ಎಂದರೆ ಸರಿ, ಆದರೆ ಅವರು ಹಕ್ಕು ನಿವೃತ್ತಿಯನ್ನು ನಾನು ಹಾಗೂ ನನ್ನ ಗಂಡ ಮತ್ತು ಮಕ್ಕಳ ಜೊತೆಯಿಂದ ಎಂದು ನುಡಿಯುತ್ತಾರೆ, ಊರಿನ ಆಸ್ತಿಗಳಿಗೆ ಸಂಬಂಧಪಟ್ಟಂತೆ ಹಕ್ಕು ನಿವೃತ್ತಿ ಹೊಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು 07.06.2002 ರ ಹಕ್ಕು ನಿವೃತ್ತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಡಿ.3 ಎಂದು ಗುರುತಿಸಲಾಯಿತು. 1984 ರಲ್ಲಿ ನಿಮಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು 1981 ರಲ್ಲಿ ತಿಪಟೂರು ತಾಲ್ಲೂಕಿನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೆನು ಎಂದು ನುಡಿಯುತ್ತಾರೆ. ಬಿ.ಹೆಚ್.ಕುಮಾರ್ ನನ್ನ ಎರಡನೇ ಮಗ ಶಿರಾ ಜ್ಯೋತಿನಗರದಲ್ಲಿ ಇರುವ ಮನೆಯನ್ನು ಮಾರಿಕೊಂಡು ಹೋಗಿ

ಆತನ ಹೆಂಡತಿಯ ಊರಿನಲ್ಲಿ 10 ಎಕರೆ ಹೊಲವನ್ನು ತೆಗೆದುಕೊಂಡಿದ್ದಾನೆ ಎಂದರೆ ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ.

11. ನನ್ನ ಹಿರಿಯ ಮಗ ಸರ್ಕಾರಿ ಹರಾಜಿನಲ್ಲಿ 19.03.2013 ರಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್ ನಲ್ಲಿ ಕಮರ್ಷಿಯಲ್ ಸೈಟು ಖರೀದಿ ಮಾಡಿದ್ದಾರೆ ಎಂದರೆ ಸರಿ, ನನ್ನ ಸೊಸೆ ಖರೀದಿ ಮಾಡಿದ್ದು, ಅವರು ಸ್ಟಾಫ್ ನರ್ಸ್ ಆಗಿದ್ದಾಳೆ, ಹಣವನ್ನು ಕಟ್ಟಲಾಗದೆ ಸದರಿ ಸೈಟನ್ನು ವಾಪಸ್ಸು ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. 12.09.2013 ರಲ್ಲಿ ನಿಮ್ಮ ಸೊಸೆಯ ಹೆಸರಿಗೆ ತುಮಕೂರು ಕರ್ನಾಟಕ ಹೌಸಿಂಗ್ ಬೋರ್ಡ್ ನಲ್ಲಿ ಕಮರ್ಷಿಯಲ್ ಸೈಟು ಖರೀದಿ ಮಾಡಿದ್ದೇವೆ ಎಂದರೆ ಸಾಕ್ಷಿಯು ಒಂದು ಸೈಟನ್ನು ತೆಗೆದುಕೊಂಡಿದ್ದು, ಒಂದು ಸೈಟನ್ನು ಹಣ ಕಟ್ಟಲಾಗದೆ ಸರ್ಕಾರಕ್ಕೆ ವಾಪಸ್ಸು ಮಾಡಿದ್ದೇವೆ ಎಂದು ನುಡಿಯುತ್ತಾರೆ. ಎಲ್ಲಾ ಸೈಟುಗಳು ಒಟ್ಟು ಕುಟುಂಬದಿಂದ ತೆಗೆದುಕೊಂಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾಸಪ್ಪ ಮತ್ತು ನನ್ನ ಗಂಡನೇ ಒಟ್ಟು ಕುಟುಂಬದ ಸ್ವಾಧೀನದಲ್ಲಿ ಇದ್ದು, ಅವರೇ ಆದಾಯವನ್ನು ತೆಗೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಯಾವುದೇ ಆದಾಯವನ್ನು ಮಹಲಿಂಗಪ್ಪನವರು ಕೊಡುತ್ತಿರಲಿಲ್ಲ, ಇಲ್ಲಿಯವರೆಗೂ ನಮಗೆ ಏನನ್ನೂ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**